1895ನೇ ಇಸವಿ ಮೇ ತಾರೀಖು 20ರಲ್ಲು ಮದ್ದಗಿರಿ ಡಿಪೋದಲ್ಲಿ.

ತಪಶೀಲ್.			ಪಲ್ಲ.	ಮಣ.	ಸೇರು.	
ಜೇನುತುಪ್ಪ	..	..	..	10	..	ಸುಮಾರು
ಜೇನುಮೇಣ	..	..	..	3	4	ಡಿಟೋ
ಗೇರುಬೀಜ	..	..	1	..	50	ಡಿಟೋ
ಅರಗು	..	..	..	..	20	ಡಿಟೋ
ಅಳಲೇಕಾಯಿ	..	..	..	180	..	ಡಿಟೋ

1895ನೇ ಇಸವಿ ಮೇ 31ನೇ ತಾರೀಖಿನಲ್ಲಿ ಕಿರಾ ಮುಸಾಫರ್ ಬಂಗ್ಲೆಯಲ್ಲಿ.

ತಪಶೀಲ್.			ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	..	..	92	24	ಸುಮಾರು
ಹುಣಸೇಹಣ್ಣು	..	..	...	6	..	ಡಿಟೋ

1895ನೇ ಇಸವಿ ಜೂನ್ ತಾರೀಖು 10ರಲ್ಲು ಹುಲಿಯೂರುದುರ್ಗದ ಹಳೇ ತಾಲ್ಲೂಕು ಕಚೇರಿಯಲ್ಲಿ.

ತಪಶೀಲ್.			ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	..	..	39	..	
ಕಪಿಲಾರಂಗು	..	..	..	..	31	
ಸೀಗೇಕಾಯಿ	..	..	..	25	20	
ಹುಣಸೇಹಣ್ಣು	..	..	..	22	..	

ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಮತ್ತು ಹರಾಜು ತಾರೀಖು ಲಾಗಾಯತು ಕಾವಲು ಕಟ್ಟನೆ ಖರೀದಿದಾರ್‌ರಿಗೇ ಸಂಬಂಧಪಡುತ್ತೆ.

ನ್ಯೇ

ಕೇಕಡಾ 25 ರೂಪಾಯಿಗಳಂತೆ ಡಿಪಾಜಿಟ್ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯ್ತು ವಂದು ವಾರದ ಒಳಗಾಗಿ ಪಾವತಿ ಮಾಡಬೇಕು. ತಪ್ಪಿದರೆ ಬಾಬನ್ನ ಪುನಹ ಹರಾಜು ಹಾಕಲ್ಪಡುತ್ತೆ, ಲುಕ್ಸಾನಿಗೆ ಮೊದಲು ಖರೀದಿದಾರ್‌ನ್ನ ಗುರಿಮಾಡುತ್ತೆ. ಸಾಮಾನುಗಳನ್ನು ಹರಾಜು ಆದ ಹತ್ತು ದಿವಸದ ಒಳಗಾಗಿ ತೆಗದುಕೊಂಡು ಹೋಗಬೇಕು. ಇವುಗಳ ಶಿವಾಯಿ ಇತರ ಸಂಗತಿಗಳಿಗೆ 1887ನೇ ಇಸವಿ ಸೆಪ್ಟಂಬರ್ 3ನೇ ಮತ್ತು ಂ 35ನೇ ನಂಬರ್ ಮೈಸೂರ ಗೆಜೆಟ್ಟಿನಲ್ಲಿ ಮೊದಲು ಭಾಗದ ಲ್ಲಿರುವ 1887ನೇ ಇಸವಿ ಆಗಸ್ಟ್ 30ನೇ ಮತ್ತು ಂ 99ನೇ ನಂಬರ್ ಪ್ರಕಟನೆಯನ್ನ ನೋಡಿ.

ಬಿ. ಕೆ. ವೆಂಕಟಪರದಯ್ಯಂಗಾರ್,
ಡಿಪ್ಯೂಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟ್.

ಬೇಲೂರು ತಾಲ್ಲೂಕು.

ಇಸ್ತಿಹಾರ್‌ನಾವಾ.

ತಾರೀಖು 25ನೇ ಏಪ್ರಿಲ್ ಸ್ಯ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇ ದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1895ನೇ ಇಸವಿ ಜುಲೈ ತಾರೀಖು 10ನೇ ಬುಧವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮ್ಮಿಷನರ್ ಸಾಹೆಬರವರ ಮುಂಜಾರಾತಿಗೆ ವಳಪ ಡಿಸಿ ಬೇಲೂರು ತಾಲ್ಲೂಕು ಅಮಲ್‌ದಾರ್ ರೂಬರೂ ಬೇಲೂರು ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿ ಸಲ್ಪಡುವವು.

2. ಮಾಮೂಲ್ ಪರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಸ್ಸೆಸ್ಮೆಸ್ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖ್ಯೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಸ್ಸೆಸ್ಮೆಂಟ್ಪೈಸ್) ಪೈಕಿ ಯಾ ಚವಥಾ ಹಿಸ್ಸೆ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮಿನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಪುರೂ ತೇವಣೀ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್ಮೆಸ್ಯಾನೆ ನಿಯಮವಾದ ಸರ್ಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೇ ಖರ್ಚು ಮೊಬಲಗು ಮತ್ತು ಸರ್ಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರ್ಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ತೇವಣೀ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಆಖ್ಯೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖ್ಯೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ತೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳದದ್ದನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮ್ಮಿ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು, ಆದರೆ ಜಾಸ್ತೀ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿದ ಮೊಬಲಗು, ಹಣ ಕೊಡಲು ತಪ್ಪಿದಂಥಾ ಪುರೂ ಹರಾಜುದಾರನ ಸವಾಲ್ ಮೊಬಲಗ್ಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾಪಟ್ಟಿದ ಮೊಬಲಗನ್ನ ಸದರೀಯವನಿಂದ ರವಿನ್ಯೂ. ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮಿನನ್ನು ಪುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮಿನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅವರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮಿನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮ್ಮಿ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮಿನಿನ್ನ		ಷರಾ.
				ಎಸ್ತೀರ್ಣ.	ಆಕಾರ.	
2 ಪೈಕಿ ಸೋಡಾದ ನಂಬರು 172.	ಮಸ್ಟರ್ ಜೆ. ಜಿ. ಎಚ್. ಕ್ಯಾಫರ್ಡ್ ಸಾಹೆಬರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂ. 7, 8, 9, 10 ಮತ್ತು ಮಾಕೆ ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೈಕಿ ಭಾಗ ಪೂರ್ವಕ್ಕೆ—ಸರ್ವೆ ನಂ. 88 ಮತ್ತು 1 ಪಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ ಭಾಗ	ಗ. ನಾ. 109—24		ಬಾಯಂ ಕಂದಾಯ ಎಕರೆ 1ಕ್ಕೆ 1—0—0 ಹಂಗಾಮಿ ಕಂದಾಯ ಡಿಟೋ 1—0—0 ಜಮ್ಮಿ ಪಡಿಯುವನ ಇಷ್ಟದಂತೆ ಇರ್ಪ ರಯಿತನ್ನಾಗಿ ಇರತಕ್ಕದ್ದು.

ತಿಳುವಳಿಕೆ ಷರಾ.—ಬಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಈಚ್ಗೆ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಸ್ಸೆಸ್ಮೆಸ್ ವಸೂಲಾದ್ದರಲ್ಲಿ ಕರಾರುವಾಕಾ ವೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತೀ ಎಕರೆ ಸಂಬಂಧ ಅಸ್ಸೆಸ್ಮೆಂಟ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮ್ಮಿ ಹಿಡುವಳಿದಾರನು ಬದ್ಧವ ಅರ್ಹನಾಗಿರಬೇಕು.